1. ಜಿಲ್ಲಾ ನ್ಯಾಯಾಲಯಗಳು.

2. ಸಿವಿಲ್ ನ್ಯಾಯಾಲಯಗಲು.

3. ಮುನ್ಸಿಫ್ ನ್ಯಾಯಾಲಯಗಳು.

ಇದರ ಜೊತೆಗೆ ಬೆಂಗಳೂರು ನಗರದಲ್ಲಿ ಜಿಲ್ಲಾ ನ್ಯಾಯಾದೀಶರು ಮತ್ತು ಸಿವಿಲ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಸಿಟಿ ಸಿವಿಲ್ ನ್ಯಾಯಾಲಯ ಹಾಗೂ ಲಘು ವ್ಯಾಜ್ಯಗಳ ನ್ಯಾಯಾಲಯಗಳು ಇವೆ.

1. ಜಿಲ್ಲಾ ನ್ಯಾಯಾಧೀಶರು
   ಪರಿಶಿಷ್ಟ ಜಾತಿ 8
   ಪರಿಶಿಷ್ಟ ಪಂಗಡ ಇಲ್ಲ

2. ಸಿವಿಲ್ ನ್ಯಾಯಾಧೀಶರು
   ಪರಿಶಿಷ್ಟ ಜಾತಿ 3
   ಪರಿಶಿಷ್ಟ ಪಂಗಡ ಇಲ್ಲ

3. ಮುನ್ಸಿಫ್ ನ್ಯಾಯಾಧೀಶರ
   ಪರಿಶಿಷ್ಟ ಜಾತಿ 31
   ಪರಿಶಿಷ್ಟ ಪಂಗಡ 9

ಇ) ಇದುವರೆಗೆ ಜರುಗಿಸಿರುವ ವಿಶೇಷ : ಕ್ರಮ ನೇರ ನೇಮಕಾತಿಯಲ್ಲಿ ಮುನ್ಸಿಫರ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ. 18ರಷ್ಟು ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ. 3ರಷ್ಟು ಮೀಸಲಾತಿ ಹುದ್ದೆಗಳನ್ನು ನೀಡುವಲ್ಲಿ ಪ್ರಾತಿನಿಧ್ಯವನ್ನು ಉಳಿಸಿಕೊಂಡು ಬಂದಿದೆ.

ವಿಷಯ: ಚಾಮರಾಜಪೇಟೆಯಲ್ಲಿರುವ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಉಪನಿರ್ದೇಶಕರ ಕಛೇರಿ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 174(451)

ಶ್ರೀ. ಬಿ.ಎನ್. ನಂಜೇಗೌಡ (ಬಸವನಗುಡಿ)

ಮಾನ್ಯ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಾಮರಾಜಪೇಟೆಯಲ್ಲಿರುವ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪ ನಿರ್ದೇಶಕರ ಕಚೇರಿ ದಕ್ಷಿಣ ವಲಯದಲ್ಲಿ ಕೆಲಸಗಳ ಹೊರೆಯು ಹೆಚ್ಚಾಗಿದ್ದು, ಸದರಿ

ಕಛೇರಿಯನ್ನು ಎರಡುವಲಯಗಳಾಗಿ ವಿಭಾಗಿಸುವ ಅಶ್ಯಕತೆ ಇರುವುದು ಸರ್ಕಾದ ಗಮನಕ್ಕೆ ಬಂದಿದೆಯೆ.

ಬ) ಬನಶಂಕರಿಯ 1 ರಿಂದ 30ವರೆಗಿನ ಹಂತದಲ್ಲಿನ ಬಿ.ಟಿ.ಎಂ. ಲೇಔಟನಲ್ಲಿನ ಜೆ.ಪಿ. ನಗರದ 1 ರಿಂದ 5ನೇ ಹಂತದಲ್ಲಿನ ಮತ್ತು ತೀರ ದಕ್ಷಿಣದ ಬಡಾವಣೆ ಪ್ರದೇಶಗಳಲ್ಲಿ ವಾಸಿಸುವ ಸಾರ್ವಜನಿಕರಿಗೆ ಈ ಕಛೇರಿಯಲ್ಲಿ ಕೆಲಸ ಮಾಡಿಸಿಕೊಳ್ಳಲು ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಕ) ಸಾರ್ವಜನಿಕ ಹಿತದೃಷ್ಟಿಯ ಮೇರೆಗೆ ಸದರಿ ಕಛೇರಿಯನ್ನು ವಿಭಾಗಿಸಿ, ಒಂದು ಕಚೇರಿಯನ್ನು ಜಯನಗರ ಪ್ರದೇಶದಲ್ಲಿ ತೆಗೆಯಲು ಸರ್ಕಾರವು ಸೂಕ್ತಕ್ರಮ ಕೈಗೊಳ್ಳುವುದೇ?

ಶ್ರೀ. ಎಸ. ನಂಜಪ್ಪ
ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.

ಅ) ಇಲ್ಲ.

ಬ) ಇಲ್ಲ.

ಕ) ಉದ್ಭವಿಸುವುದಿಲ್ಲ.

ವಿಷಯ : ಉತ್ತರ ಕನ್ನಡ ಜಿಲ್ಲೆಯಲ್ಲಿ ಜಲವಿದ್ಯುತ್ ಯೋಜನೆಗಳ ಬಗ್ಗೆ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 176(349)
ವಿಶ್ವೇಶ್ವರಾ ಹೆಗಡೆ (ಅಂಕೋಲಾ)

ಮಾನ್ಯ, ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಅಸ್ತಿತ್ವಕ್ಕೆ ಬಂದಿರುವ ಜಲವಿದ್ಯುತ್ ಯೋಜನೆಗಳಿಂದ ಉತ್ಪತ್ತಿಯಾಗುತ್ತಿರುವ ವಿದ್ಯುತ್ತಿನ ಪ್ರಮಾಣ ಎಷ್ಟು ಹಾಗೂ ಆ ಯೋಜನೆಗಳ ಅಂದಾಜಿನಂತೆ ಪ್ರಮಾಣ ಎಷ್ಟಿರಬೇಕಿತ್ತು?

ಆ) ಈಗಾಗಲೇ ವಿವಿಧ ಹಂತಗಳಲ್ಲಿರುವ ಹಾಗೂ ಪರಿಶೀಲನೆಯಲ್ಲಿರುವ ಜಲವಿದ್ಯುತ್ ಹಾಗೂ ಇತರ ಮೂಲಗಳ ವಿದ್ಯುತ್ ಯೋಜನೆಗಳ ವಿವರಗಳೇನು?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಅಸ್ತಿತ್ವಕ್ಕೆ ಬಂದಿರುವ ಜಲವಿದ್ಯುತ್ ಯೋಜನೆಗಳ ವಿವರ ಈ ಕೆಳಗಿನಂತಿವೆ.